ಆ) ಬಂದಿದೆ.

ಇ) ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಮೈಸೂರು ಜಿಲ್ಲೆಯಲ್ಲಿ ಮುಚ್ಚಿರುವ ಕೈಗಾರಿಕೆಗಳು

2304 - ಶ್ರೀ ಎ. ರಾಮದಾಸ (ಕೃಷ್ಣರಾಜ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಮುಚ್ಚಿರುವ ಅಥವಾ ರೋಗಗ್ರಸ್ಥವಾಗಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು? ಅದರಿಂದಾಗಿ ಕೆಲಸ ಕಳೆದುಕೊಂಡಿರುವ ಕಾರ್ಮಿಕರ ಸಂಖ್ಯೆ ಎಷ್ಟು?*

ಆ) *ಕೆಲಸ ಕಳೆದುಕೊಂಡ ಎಷ್ಟು ಜನ ಕಾರ್ಮಿಕರಿಗೆ ಕಾನೂನಿನಂತೆ ಬರಬೇಕಾದ ಎಲ್ಲಾ ಹಣಕಾಸಿನ ಭತ್ಯೆಗಳು ದೊರತಿವೆಯೇ?*

ಇ) *ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಮುಚ್ಚಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು? ಅದರಿಂದಾಗಿ ಕೆಲಸ ಕಳೆದುಕೊಂಡಿರುವ ಕಾರ್ಮಿಕರ ಸಂಖ್ಯೆ ಎಷ್ಟು? ಕೆಲಸ ಕಳೆದುಕೊಂಡ ಕಾರ್ಮಿಕರ ಪುನರ್ ಜೀವನಕ್ಕೆ ಯೋಜನೆಗಳನ್ನೇನಾದರು ಅನುಷ್ಠಾನಗೊಳಿಸಲಾಗಿದೆಯೇ?*

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ 40 ಕೈಗಾರಿಕಾ ಸಂಸ್ಥೆಗಳು ಮುಚ್ಚಿರುತ್ತವೆ. ಅದರಿಂದಾಗಿ 7,113 ಕಾರ್ಮಿಕರು ಕೆಲಸ ಕಳೆದುಕೊಂಡಿರುತ್ತಾರೆ.

ಆ) ಒಟ್ಟು 1020 ಕಾರ್ಮಿಕರಿಗೆ ಕಾನೂನು ರೀತ್ಯಾ ಬರಬೇಕಾದ ಎಲ್ಲಾ ಹಣಕಾಸಿನ ಭತ್ಯೆಗಳನ್ನು ನೀಡಲಾಗಿದೆ.

ಇ) ಮುಚ್ಚಿರುವ ಕೈಗಾರಿಕೆಗಳ ಸಂಖ್ಯೆ 07

ಕೆಲಸ ಕಳೆದುಕೊಂಡಿರುವ ಕಾರ್ಮಿಕರ ಸಂಖ್ಯೆ 828

ಕೆಲಸ ಕಳೆದುಕೊಂಡಿರುವ ಕಾರ್ಮಿಕರ ಪುನರ್ ಜೀವನಕ್ಕೆ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದಿಲ್ಲ.

ಆರಕಲಗೂಡು ತಾಲ್ಲೂಕಿನ ರಸ್ತೆಗಳ ದುರಸ್ಥಿ

2306 - ಶ್ರೀ ಎ.ಟಿ. ರಾಮಸ್ವಾಮಿ (ಆರಕಲಗೂಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆರಕಲಗೂಡು ತಾಲ್ಲೂಕಿನ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*